ಇ) ಸದರಿ ಉಗ್ರಾಣವನ್ನು ಮಂಡಳಿಯ ವಿಭಾಗೀಯ ಉಗ್ರಾಣದೊಂದಿಗೆ ವಿಲೀನಗೊಳಿಸುವುದರಿಂದ ಸಾರ್ವಜನಿಕರಿಗೆ ಒದಗಿಸುವ ಸೇವೆಯಲ್ಲಿ ಯಾವುದೇ ರೀತಿ ಅಲ್ಲಿಯೇಯ ಕುಂದು ಕೊರತೆಯೂ ಉಂಟಾಗದಂತೆ ಮಂಡಳಿಯು ಎಲ್ಲಾ ಆಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ. ಅಲ್ಲದೇ ಈ ಉಗ್ರಾಣವನ್ನು ವಿಲೀನಗೊಳಿಸುವ ಮುನ್ನ ಈ ವಿಷಯವನ್ನು ಸವಿಸ್ತಾರವಾಗಿ ಪರಿಶೀಲಿಸಿ, ವಿಲೀನಗೊಳಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಉಗ್ರಾಣವನ್ನು ಸವಣೂರಿ ನಲ್ಲಿಯೇ ಮುಂದುವರಿಸುವ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿರುವ ಸಾರಾಯಿ ಅಂಗಡಿಗಳು

685 (595) ಶ್ರೀ ಡಿ.ಎಸ್. ಮಾದಪ್ಪ(ಮಡಿಕೇರಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಡಗು ಜಿಲ್ಲೆಯಲ್ಲಿ ಪರವಾನಗಿ ಹೊಂದಿರುವ ಸಾರಾಯಿ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು? ಹಾಗೂ ಅನಧಿಕೃತ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು?

2) ಕೊಡಗಿನಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳಿರುವುದು ಮತ್ತು ಜಿಲ್ಲೆಯ ಗಡಿ ಭಾಗಗಳಲ್ಲಿ ಅಕ್ರಮ ಮದ್ಯ ಸಾಗಾಣಿಕೆ ವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ ಗಡಿ ಪ್ರದೇಶದಲ್ಲಿ ಅಕ್ರಮ ಮದ್ಯ ವ್ಯವಹಾರವನ್ನು ನಿಯಂತ್ರಸಲು ಹಾಗೂ ಅನಧಿಕೃತ ಸಾರಾಯಿ ಅಂಗಡಿ ಗಳನ್ನು ತೆರವು ಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

1) 327ಈಗ ಇರುವುದಿಲ್ಲ.

2) ಹೌದು

3) ಅನಧೀಕೃತ ಸಾರಾಯಿ ಅಂಗಡಿಗಳ ಬಗ್ಗೆ ದೂರುಗಳು ಬಂದಾಗ ಕರ್ನಾಟಕ ಅಬಕಾರಿ ಕಾಯ್ದೆ ಪ್ರಕಾರ ಕ್ರಮ ಜರುಗಿಸಿ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಗಡಿ ಪ್ರದೇಶದಲ್ಲಿ ಅಕ್ರಮ ಮದ್ಯ ವ್ಯವಹಾರವನ್ನು ನಿಯಂತ್ರಿಸಲು ಅಬಕಾರಿ ನಿಯಮಗಳ ಅಡಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತದೆ.

ಬೈಲಹೊಂಗಲ ಅಗ್ನಿಶಾಮಕದಳ ಕಾರ್ಯಾಲಯದ ಕಟ್ಟಡ ಹಾಗೂ ವಸತಿ ಗೃಹಗಳನ್ನು ಕಟ್ಟುವುದು.

686(724) ಶ್ರೀ ಕೌಜಲಗಿ ಮಹಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಕಾರಾಗೃಹ, ಗೃಹ ರಕ್ಷಕದಳ, ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಅಗ್ನಿಶಾಮಕ ಠಾಣೆ ಕಟ್ಟಡ ಮತ್ತು ವಸತಿಗೃಹಗಳು ಇಲ್ಲದೇ ಇರುವುದರಿಂದ ಅಗ್ನಿ ಶಾಮಕ ದಳದ ಸಿಬ್ಬಂದಿಗೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;